**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ24.12.2025 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜೆ ಪಿ ವಕೀಲರಿಂದಃ</u>**

ನಾನು 7 ವರ್ಷಗಳಿಂದ ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ನರಸೀಪುರದಲ್ಲಿ ಮಾತ್ರ ಕೆಲಸ ಮಾಡುತ್ತೇನೆ. ನಾನು ಬನ್ನೂರಿನ ಹೋಟೆಲಿನಲ್ಲಿ ಯಾವತ್ತೂ ಕೆಲಸ ಮಾಡಿರುವುದಿಲ್ಲ. ನಾನು ನರಸೀಪುರದಲ್ಲಿನ ಒಂದೇ ಹೋಟೆಲಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಸಂಬಳ ದಿನಕ್ಕೆ ರೂ.250/- ಇರುತ್ತದೆ. 2 ನೇ ಎದುರುದಾರರು ತಿ.ನರಸೀಪುರದಲ್ಲಿ ಮನೆ ಮಾಡಿಕೊಂಡು ವಾಸವಿದ್ದಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ನಾನು ಮತ್ತು ನನ್ನ ಗಂಡ ಅಕ್ಕೂರು ಗ್ರಾಮದಲ್ಲಿ ಜೊತೆಯಲ್ಲಿ ವಾಸವಿದ್ದೆವು ಎಂದರೆ ಸರಿ. ನನ್ನ ಗಂಡ ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ತಿ.ನರಸೀಪುರದಲ್ಲಿ ವಾಸವಿದ್ದಾಗ ನಾನು ಅಕ್ಕೂರಿನಿಂದ ಹೇಳದೇ ಕೇಳದೇ ನನ್ನ ತವರು ಮನೆಗೆ ಸ್ವ ಇಚ್ಛೆಯಿಂದ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಗಂಡ ಅನಾರೋಗ್ಯ ಪೀಡಿತನಾಗಿದ್ದರೂ ಕೂಡಾ ನಾನು ಅವರು ಆರೋಗ್ಯವಾಗಿದ್ದಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಅನಾರೋಗ್ಯದಿಂದ ಬಳಲುತ್ತಿದ್ದಾಗ ಅವರನ್ನು ಆರೈಕೆ ಮಾಡದೇ ನನ್ನ ಕರ್ತವ್ಯ ನಿಭಾಯಿಸದೇ ನಾನು ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಒಂದನೇ ಎದುರುದಾರರನ್ನು ತನ್ನ ಮಗಳ ಪ್ರೀತಿಯಿಂದ ವಂಚಿತರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಎದುರುದಾರರು ನನಗೆ ಹಣ ತರುವಂತೆ ಒತ್ತಾಯ ಮಾಡುತ್ತಿದ್ದ ವಿಚಾರವಾಗಿ ನಾನು ಅವರ ವಿರುದ್ಧ ಯಾವುದೇ ಕಾನೂನುಕ್ರಮ ಕೈಗೊಂಡಿರುವುದಿಲ್ಲ. ನಾನು ಹಾಜರು ಪಡಿಸಿರುವ ಪಹಣಿ ಪತ್ರಿಕೆಯ ಆಸ್ತಿಯಲ್ಲಿ 2 ಮತ್ತು 3 ನೇ ಎದುರುದಾರರಿಗೂ ಕೂಡಾ ಹಕ್ಕು ಇದೆ ಎಂದರೆ ಸರಿಯಲ್ಲ. 1 ನೇ ಎದುರುದಾರನು ಅನಾರೋಗ್ಯದಿಂದ ಬಳಲುತ್ತಿರುವ ಕಾರಣ ಆತನಿಗೆ ವ್ಯವಸಾಯ ಮಾಡಲು ಸಾಧ್ಯವಾಗುತ್ತಿಲ್ಲ ಮತ್ತು ಅದರಿಂದ ಆತ ಯಾವುದೇ ಆದಾಯ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಒಂದನೇ ಎದುರುದಾರನ ಆದಾಯವನ್ನು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ. ಆ ರೀತಿ ನಾನು ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ ಪಿ 3 ರ ಪಹಣಿಯು ನನ್ನ ಮಾವನ ತಂದೆಯ ಹೆಸರಿನಲ್ಲಿ ಇರುತ್ತದೆ. ನನ್ನ ಮಾವನ ತಂದೆಗೆ ಮೂರು ಜನ ಮಕ್ಕಳು ಇರುತ್ತಾರೆ. ಅವರ ನಡುವೆ ಕೂಡಾ ವಿಭಾಗ ಆಗಿಲ್ಲ ಎಂದರೆ ಸರಿ.

ನಾನು ಸಿ ಡಿ ಪಿ ಒ ಗೆ ದೂರು ಕೊಟ್ಟ ನಂತರ ಒಂದು ಬಾರಿ ಅಕ್ಕೂರಿನಲ್ಲಿರುವ ನನ್ನ ಗಂಡನ ಮನೆಗೆ ಹೋಗಿದ್ದು ಆದರೆ ನನ್ನ ಗಂಡ ನನಗೆ ಊಟ ಕೊಡದೇ ಚಿತ್ರಹಿಂಸೆ ಕೊಟ್ಟ ಕಾರಣ ನಾನು ವಾಪಾಸ್ಸು ತವರು ಮನೆಗೆ ಹೋಗಿರುತ್ತೇನೆ. ನಾನು ಆ ರೀತಿ ಅಕ್ಕೂರಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ಆದಾಯ ಮತ್ತು ವೆಚ್ಚದ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸದರಿ ಪ್ರಮಾಣಪತ್ರದಲ್ಲಿ ನಾನು 2019 ರಿಂದ ಪ್ರತ್ಯೇಕವಾಗಿ ವಾಸವಾಗಿರುತ್ತೇನೆ ಎಂದರೆ ಸರಿ. 1 ನೇ ಎದುರುದಾರನು ಅನಾರೋಗ್ಯದಿಂದ ಬಳಲುತ್ತಿರುವ ಕಾರಣ ಅವರ ಯೋಗಕ್ಷೇಮವನ್ನು ನೋಡಿಕೊಳ್ಳುವುದನ್ನು ತಪ್ಪಿಸಿಕೊಳ್ಳುವುದರಿಂದ ನಾನು ಎದುರುದಾರರ ವಿರುದ್ಧ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಒದಿ ಹೇಳಿ ಕೇಳಿ ಸರಿಯಾಗಿದೆ.

**(ಸಚಿನ್ ಹೆಚ್.ಆರ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ .ಎಂ .ಎಫ್ .ಸಿ ., ತಿ .ನರಸೀಪುರ .**